JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮೈಲಾರಲಿಂಗ ಜಾತ್ರೆ : ಕಂಚಾವೀರ ಪವಾಡಗಳು

**ಇಂದ್ರವ್ವ ಎನ್ ಬುಡ್ನಾಳವರ**
ಸಂಶೋಧನಾರ್ಥಿ
ಸಮಾಜಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಪ್ರಸ್ತಾವನೆ**

ಸಾಮಾನ್ಯವಾಗಿ ಒಂದೊಂದು ದೇವತೆ ಒಂದೊಂದು ಮತ ಪಂಥದವರ ವಿಶೇಷ ಆದರಕ್ಕೆ ಪೂಜೆಗೆ ಪಾತ್ರವಾಗಿ ಅವರವರಿಂದಲೇ ಪೂಜೆಗೊಳ್ಳುವುದನ್ನು ನಾವು ಕಾಣುತ್ತೇವೆ. ಆದರೆ ಈ ವಿಷಯದಲ್ಲಿ ಮೈಲಾರ ಅಪವಾದವೆಂದು ಹೇಳಬಹುದು. ಜಾತಿ, ಕುಲ, ಮತ, ಪಂಥಗಳನ್ನು ಮೀರಿ ನಿಂತು ಭಿನ್ನ ಭಿನ್ನ ಕುಲದವರ ಭಿನ್ನ ಭಿನ್ನ ಮತ ಪಂಥಗಳ ಅನುಯಾಯಿಗಳಿಗೆ ಇವನು ವಿವಿಧ ಪಂಗಡಗಳ ಜನರು ಕೇವಲ ಇವನ ಮೇಲಿನ ಭಕ್ತಿಯಿಂದ ನೆರೆಯುವುದನ್ನು ನಾವು ಕಾಣಬಹುದು. ಇವನೊಬ್ಬ ಸಾಮಾನ್ಯ ಜನರ, ಬಡಜನರ ಆರಾಧ್ಯ ದೈವ. ಮೇಲು ಕೀಳು ಎನ್ನದೇ, ಬಡವ ಬಲ್ಲಿದ ಎನ್ನದೇ ಎಲ್ಲರೂ ಒಂದೇ ಕಡೆ ಸೇರುವ ದೇವರೆಂದರೆ ಈ ಮೈಲಾರಲಿಂಗ ಮಹತ್ವದ ದೈವ ಎಂದು ಹೇಳಿದರೆ ತಪ್ಪಾಗಲಾರದು ಎನಿಸುತ್ತದೆ. ಪ್ರತಿ ವರ್ಷ ಭರತ ಹುಣ್ಣಿಮೆಯಂದು ಮೈಲಾರಲಿಂಗನ ಜಾತ್ರೆ ಅವನ ಕ್ಷೇತ್ರವಾದ ನೂತನ ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಮೈಲಾರದಲ್ಲಿ ನಡೆಯುತ್ತದೆ.

**ಕ್ಷೇತ್ರ ಪರಿಚಯ:** ಮೈಲಾರ ಸುತ್ತ ಬರಿ ಗುಡ್ಡಗಾಡುಗಳಿದ್ದು, ಪಕ್ಕದಲ್ಲಿ ತುಂಗಭದ್ರಾ ನದಿ ಹರಿಯುತ್ತಿದೆ. ಕೇವಲ ಒಂದು ಕಡೆ ಮಾತ್ರ ರಸ್ತೆ ಇದೆ. ಹಾಗಾಗಿ ಈ ಜಾತ್ರೆಗೆ ಅಥವಾ ಗ್ರಾಮಕ್ಕೆ ಸುತ್ತುವರಿದುಕೊಂಡು ಬರುವುದರಿಂದ 'ಕೊಂಕಣ ಸುತ್ತಿ ಮೈಲಾರಕ್ಕೆ ಬಾ' ಎಂಬ ಗಾದೆ ತನ್ನ ಖ್ಯಾತಿಯನ್ನು ಇಂದಿಗೂ ಉಳಿಸಿಕೊಂಡಿದೆ. ಗ್ರಾಮಕ್ಕೆ ಹೊಂದಿಕೊಂಡಿರುವ ನದಿ ಉಂಗುರಾಕಾರವಾಗಿ ಗೋಚರಿಸಿರುವುದರಿಂದ ಉಂಗ್ಲಾರ ಎಂಬ ಹೆಸರೂ ಕೂಡ ಇದಕ್ಕೆ ಬಂದಿದೆ ಎನ್ನಲಾಗಿದೆ. ಈ ಪುಣ್ಯಭೂಮಿಯಲ್ಲಿ ಆಧುನಿಕತೆಗೆ ಒಳಗಾದ ಈ ದಿನಮಾನಗಳಲ್ಲೂ ಸಹ ಕಂಚಾವೀರರ ಪರಂಪರೆಯಿಂದ ಬಂದ ಹಳೆಯ ಆಚರಣೆಗಳು ಇಂದಿಗೂ ಕೂಡ ಚಾಲ್ತಿಯಲ್ಲಿವೆ. ಜಾತ್ರೆ ಕೊನೆಗೆ ದೇಗುಲದ ಆವರಣದಲ್ಲಿ ಕಂಚಾವೀರರು, ಗೊರವಪ್ಪರಿಂದ ಭಕ್ತರನ್ನು ರೋಮಾಂಚನಗೊಳಿಸುವ ಸರಪಳಿ, ಭಗಣಿ ಗೂಟ ಪವಾಡಗಳು ಪ್ರೇಕ್ಷರ ಮೈನವಿರೆಳಿಸುತ್ತವೆ. ಇತಹ ಪದ್ಧತಿ ಆಚರಣೆಗಳು ಇಂದಿಗೂ ಚಾಲ್ತಿಯಲ್ಲಿದ್ದು, ಇದು ಮೈಲಾರಲಿಂಗೇಶ್ವರನ ಪವಾಡ ಎಂಬ ನಂಬಿಕೆ ಭಕ್ತರಲ್ಲಿ ಮನೆಮಾಡಿದೆ. ಜಾತ್ರೆ ಸಂದರ್ಭದಲ್ಲಿ ಮೈಲಾರದ ಬಾನಂಗಳದಲ್ಲಿ 'ಏಳುಕೋಟಿ ಏಳುಕೋಟಿ ಏಳುಕೋಟಿಗೋ', 'ಚಾಂಗ್ಮಲೋ' ಎಂಬ ಘೋಷಣೆ ನೆರೆದ ಲಕ್ಷಾಂತರ ಜನರನ್ನು ಭಕ್ತಿಪರವಶರನ್ನಾಗಿಸುತ್ತದೆ. ಈ ಪುಣ್ಯ ಕ್ಷೇತ್ರದಲ್ಲಿ ನಡೆಯುವ ಹಲವಾರು ಆಚರಣೆಗಳು ಮತ್ತು ಪವಾಡಗಳ ಮಿತಿಗೆ ಒಳಪಟ್ಟು ಲೇಖನವನ್ನು ಸಿದ್ಧಪಡಿಸಲಾಗಿದೆ.

**ಜಾತ್ರೆಯ ಉತ್ಸವ:** ಯಾವುದೇ ಒಂದು ಜನಾಂಗ ಮತ್ತು ಸಮುದಾಯ ಒಟ್ಟಿಗೆ ಒಂದು ಸ್ಥಳದಲ್ಲಿ ಸೇರಿ ಸಾರ್ವತ್ರಿಕವಾಗಿ ದೈವಾರಾಧನೆಯನ್ನು ಕೈಗೊಂಡು ಆ ದೇವರ ಹೆಸರಿನಲ್ಲಿ ಧಾರ್ಮಿಕ ಆಚರಣೆಗಳನ್ನು ಆಚರಿಸುವುದಾಗಿದೆ. ಆ ಮೂಲಕ ಆ ದೇವರ ಪ್ರಾಚೀನ ಪರಂಪರೆಯನ್ನು ಇಂದಿನ ಪೀಳಿಗೆಗೆ ವರ್ಗಾಯಿಸಿ ಅವರನ್ನು ಆ ದೇವರ ದೈವ ಭಕ್ತರನ್ನಾಗಿ ಮಾಡುವುದಾಗಿದೆ.

**ಜಾತ್ರೆಯ ಉದ್ದೇಶಗಳು**

- ➢ ದೇವರ ಸಾಮೂಹಿಕ ಆಚರಣೆ.
- ➢ ಜನಾಂಗಗಳಲ್ಲಿ ಸಾಂಸ್ಕೃತಿಕ ಒಗ್ಗಟ್ಟನ್ನು ತೋರಿಸುವುದು.
- ➢ ದೈವಾರಾಧನೆ ಮತ್ತು ಆ ದೈವದ ಆಚರಣೆಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವುದು.
- ➢ ಜೊತೆಗೆ ಸಾಮಾಜಿಕ ಮತ್ತು ರಾಜಕೀಯ ಬದ್ಧತೆಗಳನ್ನು ಸ್ಥಾಪಿಸಿ ಆ ಪ್ರದೇಶದ ಅಭಿವೃದ್ಧಿಯನ್ನು ಬಲಪಡಿಸುವುದು.

ಇಂತಹ ಹತ್ತಾರು ಜಾತ್ರೆಗಳು ಕರ್ನಾಟಕ ಸೇರಿದಂತೆ ಭಾರತದ ಎಲ್ಲಾ ರಾಜ್ಯಗಳಲ್ಲೂ ನಡೆಯುತ್ತವೆ. ಕರ್ನಾಟಕದಲ್ಲಿ ಶಿರಸಿ ಮಾರಮ್ಮನ ಜಾತ್ರೆ, ಸೌದತ್ತಿ ಎಲ್ಲಮ್ಮನ ಜಾತ್ರೆ, ಬಾದಾಮಿ ಬನಶಂಕರಿ ಜಾತ್ರೆ, ಮೊದಲಾದವುಗಳು ಪ್ರಮುಖ ಶಕ್ತಿ ದೇವತೆಯ ಜಾತ್ರಗಳಾಗಿವೆ. ಇನ್ನು ಉಳಿದಂತೆ, ಹಂಪಿ ವಿರೂಪಾಕ್ಷನ ಜಾತ್ರೆ, ಕುರುವತ್ತಿಯ ಬಸವಣ್ಣನ ಜಾತ್ರೆ, ಹಾಲುಮತ ಬೀರದೇವರ ಜಾತ್ರೆಗಳು ಮೊದಲಾದವು ನಡೆಯುತ್ತವೆ. ಈ ಎಲ್ಲಾ ಜಾತ್ರೆಗಳಿಗಿಂತ ಗಾತ್ರದಲ್ಲಿ ಮತ್ತು ವೈಶಿಷ್ಟ್ಯದಲ್ಲಿ ಮೈಲಾರನ ಜಾತ್ರೆಗಳು ದಕ್ಷಿಣದ ಇತಿಹಾಸದಲ್ಲಿಯೇ ಪ್ರಾಮುಖ್ಯತೆಯನ್ನು ಪಡೆದಿದೆ.

ವಿಜಯನಗರ ಜಿಲ್ಲೆ ಹಿರೇಮೈಲಾರ ಕ್ಷೇತ್ರ, ಹಾವೇರಿ ಜಿ, ರಾಣೇಬೆನ್ನೂರು ತಾ. ದೇವರಗುಡ್ಡ ಮಾಲತೇಶನ ಕ್ಷೇತ್ರ, ಕರ್ನೂಲ್ ಜಿಲ್ಲೆಯ ಮಿನಗೋಂದಿ ಮಲ್ಲಯ್ಯನ ಕ್ಷೇತ್ರಗಳಲ್ಲಿ ನಡೆಯುವ ಜಾತ್ರೆಯ ಉತ್ಸವಗಳಲ್ಲಿ ಅನೇಕ ರೀತಿಯ ಕಾರ್ಯಕ್ರಮಗಳು ನಡೆಯುತ್ತವೆ. ಉದಾಹರಣೆಗೆ ಮೌನ ಸವಾರಿ, ವಿಜಯೋತ್ಸವ, ಮನೆ ಕಟ್ಟುವ ಆಚರಣೆ, ಕಂಕಣ, ದಸರ, ಶಸ್ತ್ರ ಪವಾಡ, ದೋಣಿತುಂಬುವುದು ಕಾರಣಿಕೋತ್ಸವ, ತೇರು ಎಳೆಯುವುದು, ತಾಂಬೂಲ ಸಮರ್ಪಣೆ, ಇವುಗಳಲ್ಲದೆ ಗುಗ್ಗರಿ ಹಬ್ಬ, ಭಂಡಾರ ಪೂಜೆ, ಕುದುರೆ ಹಬ್ಬ, ಖಡ್ಗ ಸಾರುವುದು ಮುಂತಾದ ಉತ್ಸವಗಳು ನಡೆಯುತ್ತವೆ. ವಿಜಯನಗರ ಜಿಲ್ಲೆ ಮೈಲಾರದಲ್ಲಿ ನಡೆಯುವ ಮೈಲಾರಲಿಂಗನ ಜಾತ್ರೆಯನ್ನು ಕರ್ನಾಟಕದಲ್ಲಿ ನಡೆಯುವ ಬಹುದೊಡ್ಡ ಜಾತ್ರೆಯೆಂದು ಪರಿಗಣಿಸಬಹುದು. ಈ ಪುಣ್ಯ ಕ್ಷೇತ್ರವಾದಲ್ಲಿ ನಡೆಯುವ ಆಚರಣೆಗಳಣೆಗಳು, ಜಾತ್ರೆಯ ಕೊನೆಯ ದಿನ ನಡೆಯುವ ಪವಾಡಗಳು ಜಾತ್ರೆಯಲ್ಲಿ ನೆರೆದಿದ್ದ ಜನರು ನಿಬ್ಬೆರಗಾಗುವಂತೆ ಮಾಡುತ್ತವೆ.

**ಮೈಲಾರದಲ್ಲಿ ನಡೆಯುವ ಕಂಚಾವೀರ ಪವಾಡಗಳು:** ಈ ಕ್ಷೇತ್ರದ ಪವಾಡಗಳಿಗೆ ಸಂಬಂಧಿಸಿದಂತೆಯೂ ಒಂದು ಕಥೆ ಇದೆ. ಗಂಗೆಮಾಳಮ್ಮ ಎಂಬಾಕೆ ತನ್ನ ಏಳು ಮಂದಿ ಅಣ್ಣ ತಮ್ಮಂದಿರಿಗೂ ಊಟ ಹೊತ್ತು ಹೋಗುತ್ತಿರುವಾಗ, ಈಶ್ವರ ಗೊರವನ ವೇಷದಲ್ಲಿ ಬಂದು ಅವಳ ಬಳಿ ನಿಲ್ಲುತ್ತಾನೆ. ಇದನ್ನು ನೋಡಿದ ಅವಳ ಏಳು ಮಂದಿ ಅಣ್ಣತಮ್ಮಂದಿರೂ ತಮ್ಮ ಎರಡು ನಾಯಿಗಳನ್ನೂ ಅವನ ಕಡೆಗೆ ಅಟ್ಟುತ್ತಾರೆ. ಆದರೆ ಆ ನಾಯಿಗಳು ಅವನನ್ನು ಏನೂ ಮಾಡದೇ ಸುಮ್ಮನೆ ನಿಲ್ಲುತ್ತವೆ. ಆಗ ಆ ಏಳು ಮಂದಿ ಅಣ್ಣತಮ್ಮಂದಿರೇ ಅವನ ಬಳಿಗೆ ಹೋಗುತ್ತಾರೆ. ಆಗ ಗೊರವನ ರೂಪದಲ್ಲಿದ್ದ ಪರಮೇಶ್ವರ ಗಂಗೆಮಾಳಮ್ಮನನ್ನು ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಐದು ಪವಾಡಗಳನ್ನು ಮಾಡಿತೋರಿಸಿದರೆ ಮದುವೆ ಮಾಡಿಕೊಡುವುದಾಗಿ ಅವರು ಹೇಳುತ್ತಾರೆ. ಆಗ ಪರಮೇಶ್ವರ ಸರಪಳಿ ಪವಾಡ, ಶೂಲದ ಪವಾಡ, ಶಸ್ತ್ರ ಪವಾಡ, ಅಲಗು ಪವಾಡ, ಶಿರಸಿ ಪವಾಡ ಎಂಬ ಐದು ಪವಾಡಗಳನ್ನು ಮಾಡಿ ತೋರಿಸುತ್ತಾನೆ. ಈಗಲೂ ಮೈಲಾರಲಿಂಗನ ಭಕ್ತರು ಅನೇಕ ಬಗೆಯ ಪವಾಡಗಳನ್ನು ಮಾಡುತ್ತಾರೆ. ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿಯ ಪ್ರಮುಖ ಆಕರ್ಷಣೆಯೂ ಇವೇ ಆಗಿವೆ. ಇವು ಅತ್ಯಂತ ರೋಮಾಂಚನಕಾರಿಯಾಗಿರುತ್ತವೆ.

ಮೈಲಾರ ಮತ್ತು ದೇವರಗುಡ್ಡ ಕ್ಷೇತ್ರದಲ್ಲಿ ಕಂಚಾವೀರ (ಪಂಚವೀರ) ಸಮುದಾಯದವರು ಒಟ್ಟಿಗೆ ಸೇರಿಕೊಂಡು ಜಾತ್ರೆಯಲ್ಲಿ ಸೇರಿರುವ ಜನರು ನಿಬ್ಬೆರಗಾಗುವಂತಹ ಪವಾಡಗಳನ್ನು ಮಾಡಿ ತಮ್ಮ ಸೇವೆಗಳನ್ನು ದೇವರಿಗೆ ಸಮರ್ಪಿಸುತ್ತಾರೆ. ಕೈ ಪವಾಡ, ಶಸ್ತ್ರ ಪವಾಡ, ಬಗಣಿಗೂಟ ಪವಾಡ, ಸರಪಳಿ ಪವಾಡ. ಮೊದಲಾದ ಪವಾಡಗಳು ಹಿರೇಮೈಲಾರ, ಎಳ್ಳಾರ್ತಿ, ಮೊದಲಾದ ಕ್ಷೇತ್ರಗಳಲ್ಲಿ ಉತ್ಸವಗಳ ಸಂದರ್ಭದಲ್ಲಿ ಇಂದಿಗೂ ಆಚರಣೆಯಲ್ಲಿವೆ. ಡೆಂಕನ ಮರಡಿಯಲ್ಲಿ ರಾಕ್ಷಸರ ಸಂಹಾರದ ನೆನಪಿಗಾಗಿ ಹಿಂದಿನ ಕಾಲದಲ್ಲಿ ಶಿರಚ್ಛೇದ ಪವಾಡ ಮಾಡಿತ್ತಿದ್ದರು. ರಾಕ್ಷಸರಾದ ಮಣಿಕಾಸುರ, ಮಲ್ಲಾಸುರರ ಜತೆ ನಡೆದ ಯುದ್ಧದ ಸಂದರ್ಭದಲ್ಲಿ ಅವರ ರಕ್ತ ಭೂಮಿಗೆ ಬೀಳದಂತೆ ಪಾರ್ವತಿ ತುಪ್ಪದ ಮಾಳಮ್ಮನಾಗಿ ತನ್ನ ನಾಲಿಗೆಯನ್ನು ಭೂಮಿಗೆ ಚಾಚುತ್ತಾಳೆ. ಹಾಗಾಗಿ ಯುದ್ಧದಲ್ಲಿ ಸಂಹರಿಸಲ್ಪಟ್ಟ ರಾಕ್ಷಸರು ಡೆಂಕನಮರಡಿಯಲ್ಲಿ ಮತ್ತೊಮ್ಮೆ ಜನ್ಮ ತಾಳಲು ಆಗಲಿಲ್ಲ ಎಂಬ

ಉಲ್ಲೇಖವಿದೆ. ರಾಕ್ಷಸರ ಸಂಹಾರದ ನೆನಪಿಗಾಗಿ ಹಿಂದಿನ ದಿನಗಳಲ್ಲಿ ಶಿರಚ್ಛೇಧ ನಡೆಯುತ್ತಿತ್ತು. ಕಾಲಾಂತರದಲ್ಲಿ ನಿಲ್ಲಿಸಲಾಗಿದೆ. ಇತ್ತೀಚೆಗೆ ಅಹಿಂಸೆ, ವೈಚಾರಿಕತೆ, ವಿಜ್ಞಾನ, ತಂತ್ರಜ್ಞಾನ ಮುಂದುವರಿದಂತೆ ಹಿಂಸೆ ನಿಯಂತ್ರಣ ಕಾಯಿದೆಗಳು ಜಾರಿಗೆ ಬಂದಿವೆ. ಇಂತಹ ನೈಜ ಪವಾಡಗಳಿಗೆ ಕಡಿವಾಣ ಹಾಕಲಾಗಿದೆ. ಪವಾಡ ಮಾಡುವ ಮೊದಲಿನ ದಿನ ಕಂಚಾವೀರರು ಒಂದು ದಿನದ ಕಟ್ಟುನಿಟ್ಟಿನ ಉಪವಾಸ ವ್ರತ ನೆರವೇರಿಸುತ್ತಾರೆ. ಈ ವೇಳೆ ಅವರ ಮನೆಗಳಲ್ಲಿ ಮಡಿವಂತಿಕೆ ಕಾಪಾಡಿಕೊಳ್ಳುವ ದೃಷ್ಠಿಯಿಂದ ಮಹಿಳೆಯರ ಪ್ರವೇಶವನ್ನು ಸಂಪೂರ್ಣ ನಿಷೇಧಿಸಲಾಗಿರುತ್ತದೆ. ಪವಾಡ ಮಾಡುವ ಕಂಚಾವೀರರು ನಾನಾ ರೀತಿಯ ಐದು ವೇಷ ಧರಿಸುತ್ತಾರೆ. ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ಅವರ ಸಮ್ಮುಖದಲ್ಲಿ ಕಂಚಾವೀರರು ಮೆರವಣಿಗೆ ಮೂಲಕ ಬಂದು ಗಂಗಿಮಾಳಮ್ಮ ದೇವಸ್ಥಾನದ ಸರಪಳಿ ಪವಾಡ ಕಟ್ಟೆ ಮುಂದೆ ಕಂಬಳಿಯ ಗದ್ದಿಗೆ ಮೇಲೆ ಭಗಣಿಗೂಟಗಳು, ಚರ್ಮದ ಮಿಣಿಗಳು, ಮೂರಮನಿ ಮುಳ್ಳುಗಳು, ಖಡ್ಗಗಳು, ಸರಪಳಿಗಳು ಮುಂತಾದ ಪವಾಡಗಳ ಆಯುಧಗಳನ್ನಿಟ್ಟು ವೆಂಕಪ್ಪಯ್ಯ ಒಡೆಯರ್ ಅವರ ಸಮ್ಮುಖದಲ್ಲಿ ಕಂಚಾವೀರರು ಪೂಜಿಸಿ ಅವರಿಂದ ಭಂಡಾರದ ಆಶೀರ್ವಾದ ಪಡೆದು ಪವಾಡ ಮಾಡಲು ಪ್ರಾರಂಭಿಸುತ್ತಾರೆ. ಪವಾಡ ಮಾಡುವ ಕಂಚಾವೀರರ ವಂಶಸ್ಥರಲ್ಲಿ ಸರದಿಯ ಪ್ರಕಾರ ವರ್ಷಕ್ಕೆ ಒಂದು ಮನೆಯವರಂತೆ ಪವಾಡ ಮಾಡುತ್ತಾರೆ.

**ಶಸ್ತ್ರ ಪವಾಡ (ಕನ್ಯ ಪವಾಡ):** ಕನ್ನೆ ಪವಾಡ ಮದುವೆಯಾಗುವ ಮೊದಲು ಶುದ್ದ ಚಾರಿತ್ರ್ಯಯನಾಗಿ (ಕಳಂಕಿತನಾಗದೆ)ದ್ದ ಬಾಲಕನು ಮದುವೆಯ ವಯಸ್ಸು ಬಂದಾಗ ಈ ಪವಾಡ ಮಾಡಬೇಕು. ಇದನ್ನು ಮಾಡಿದ ನಂತರ ಅವನಿಗೆ ಮದುವೆಯಾಗಲು ಅರ್ಹತೆ ದೊರೆಯುತ್ತದೆ. ಉದ್ದವಾದ ಕಬ್ಬಿಣದ ಉಕ್ಕಿನ ಸರಳನ್ನು ಕಾಲಿನ ಮೀನ ಖಂಡದಲ್ಲಿ ಹಾಯಿಸುವುದೇ 'ಕನ್ನೆ ಪವಾಡ' ಎನಿಸಿಕೊಂಡಿದೆ. ಪವಾಡಕ್ಕೆ ಸಿದ್ದವಾಗಿರುವ ಕಂಚಾವೀರನನ್ನು ಮಡಿಯಾದ ಕಂಬಳಿಯ ಮೇಲೆ ಕೂರಿಸಿ ಮೊದಲು ದೇವರಿಗೆ ನಮಸ್ಕರಿಸಿ ಮೊಳಕಾಲಿನ ಕೆಳಗಿನ ಭಾಗವಾದ ಮೀನಗಂಡವನ್ನು ಒತ್ತಿ ಹಿಡಿದು ನಾಲ್ಕು ಅಡಿ ಉದ್ದವಿರುವ ಕಬ್ಬಿಣದ ಉಕ್ಕಿನ ಸಲಾಕೆ(ಶಸ್ತ್ರ)ವನ್ನು ಒಂದು ಬದಿಯಿಂದ ಒಳಗೆ ತೂರಿಸಿ ಇನ್ನೊಂದು ಬದಿಯಿಂದ ಹೊರಗೆ ತೆಗೆಯುತ್ತಾರೆ. ಹೀಗೆ ಮಾಡುವಾಗ ಎಲ್ಲಾ ಗೊರವರು ಮತ್ತು ಭಕ್ತರು ಹಾ... ಹಾ... ಎಂದು ಉದ್ಗರಿಸುತ್ತಾ, ಏಳುಕೋಟಿ, ಏಳುಕೋಟಿ ಏಳುಕೋಟಿಗೋ... ಚಾಂಗ್ಮಲೋ..., ಚಾಂಗ್ಮಲೋ... ಎಂದು ಜಯಘೋಶ ಕೂಗುತ್ತಾರೆ. ಶಸ್ತ್ರವನ್ನು ಚುಚ್ಚಿಕೊಂಡಾಗ ಹೆಚ್ಚು ರಕ್ತಸ್ರಾವ ಆಗುವುದಿಲ್ಲ. ಈ (೧೮.೦೨.೨೦೨೨)ವರ್ಷದ ಕನ್ಯ ಪವಾಡವನ್ನು ಮಾಡಿದವರೆಂದರೆ, ಅಜಯ ತಂದೆ ನೀಲಪ್ಪ ಕಂಚಾವೀರ, ವಿಜಯ ತಂದೆ ಬಸವಂತಪ್ಪ ಕಂಚಾವೀರ, ವಿಷ್ಣು ತಂದೆ ಬಸವಂತಪ್ಪ ಕಂಚಾವೀರ, ಪ್ರವೀಣ ತಂದೆ ಭಗವಂತಪ್ಪ ಕಂಚಾವೀರ ಹಾಗೂ ಚಿಕ್ಕಪ್ಪ ತಂದೆ ಅಶೋಕ ಕಂಚಾವೀರ.

**ಬಗಣಿಗೂಟ ಪವಾಡ:** ಗಟ್ಟಿಮುಟ್ಟಾದ ಮೂರು ಜನ ಗೊರವರ ಮೂಲಕ ನಡೆಯುತ್ತದೆ. ಪವಾಡಕ್ಕೆ ಸಿದ್ದವಾದ ಕಂಚಾವೀರನ ಮೊಳಕಾಲಿನ ಕೆಳಭಾಗವಾದ ಮೀನಗಂಡವನ್ನು ಒತ್ತಿಹಿಡಿದು ಚೂಪಾದ ಬಗನಿ ಗೂಟವನ್ನು ಬಡಿದು ಕೊಂಡು ರಂಧ್ರ ಮಾಡಿಕೊಂಡು ಆ ಜಾಗಕ್ಕೆ ಬೆರಳುಗಳನ್ನಿಟ್ಟು ಆದರ ಮೂಲಕ ಜಿಂಕೆಯ ಚರ್ಮದಿಂದ ಮಾಡಿದ ಕಾಲು ಇಂಚು ವ್ಯಾಸದ ಸುಮಾರು ಒಂದು ಮೀಟರ/ಒಂಬತ್ತು ಮೊಳ ಉದ್ದದ ಚಿಗರಿ ಚರ್ಮದಿಂದ ಮಾಡಿದ ಮಿಣಿಯನ್ನು ಆ ರಂಧ್ರದ ಮೂಲಕ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬರುವಂತೆ ತೂರಿಸಿ, ಮಜ್ಜಿಗೆ ಕಡೆಯುವ ಹಾಗೆ ಕಡೆದು ಹೊರ ತೆಗೆಯುವರು. ನಂತರ ಎರಡು ಮೂರಮನಿ(ಕಾರಿಮುಳ್ಳು)ಮುಳ್ಳನ್ನು ಎದುರು ಬದರು ಇರುವಂತೆ ಮೀನಗಂಡದಲ್ಲಿ ಹಾಕಿ ಎಳೆಯುವರು. ಹೀಗೆ ಮಾಡುವಾಗ ಎಲ್ಲಾ ಗೊರವರು ಭಕ್ತರು ಹಾ... ಹಾ... ಎಂದು ಉದ್ಗರಿಸುತ್ತಾರೆ. ಈ ಬಾರಿ ಮಾಲತೇಶ ಶಿವಪುತ್ರಪ್ಪ ಕಂಚಾವೀರ ಈ ಪವಾಡ ಮಾಡಿದವರು. ಪವಾಡ ಮಾಡಿದ ಕಾಲಿಗೆ ಭಂಡಾರ ಹಚ್ಚಲಾಗಿರುತ್ತದೆ. ಈ ಪವಾಡಕ್ಕೆ ಕಾರಣವೇನು? ಎಂದು ರಹಸ್ಯವನ್ನು ಹುಡುಕಿದಾಗ ಜನರು ನಂಬಿದ ದೈವ ಶಕ್ತಿಯ ಪ್ರದರ್ಶನ ಎಂಬುದು ತಿಳಿಯುತ್ತದೆ.

**ಕೈ ಪವಾಡ:** ಒಂಬತ್ತು ನಳಿಕೆಯುಳ್ಳ ಕಬ್ಬಿಣದ ಆರತಿಗೆ ಬತ್ತಿಯನ್ನು ತುರುಕಿ ದೀಪ ಹಚ್ಚಿ ಎಡಗೈ ಮುಂಬಾಗಕ್ಕೆ ಶಸ್ತ್ರ ಚುಚ್ಚಿಕೊಂಡು ದೇವರಿಗೆ ಮಂಗಳಾರತಿಯನ್ನು ಬೆಳಗಲಾಗುತ್ತದೆ. ಈ ಬಾರಿ ಭಗವಂತಪ್ಪ ಕಂಚಾವೀರ ಇವರು ಮುಂಗೈಯಲ್ಲಿ ಶಸ್ತ್ರ ಚುಚ್ಚಿಕೊಂಡು ದೇವರಿಗೆ ಆರತಿ ಬೆಳಗಿದರು.

**ಸರಪಳಿ ಪವಾಡ ಇತಿಹಾಸ:** ಇತಿಹಾಸ ಪ್ರಸಿದ್ದ ಮೈಲಾರಲಿಂಗೇಶ್ವರ ಸ್ವಾಮಿ ದೇವರ ಸರಪಳಿ ಪವಾಡ ಗಂಗಿಮಾಳಮ್ಮ ದೇವಾಲಯದ ಮುಂಭಾಗದಲ್ಲಿ ಸಹಸ್ರಾರು ಭಕ್ತಸಾಗರದ ಮಧ್ಯೆ ಶ್ರದ್ಧಾ ಭಕ್ತಿಗಳಿಂದ

ನಡೆಯುತ್ತದೆ. ಗೊರವಪ್ಪಗಳ ಏಳುಕೋಟಿ ಒಡೆಯ ಮೈಲಾರಲಿಂಗ ಎಂಬ ಕೂಗು ಗೊರವರನ್ನು ಹುರಿದುಂಬಿಸಿ ಸರಪಳಿ ಎಳೆಯುವಂತೆ ಮಾಡುತ್ತಿತ್ತು. ಈ ಪವಾಡವನ್ನು ಆರೇರು ಜನಾಂಗದ(ಮರಾಠಿ ಜನಾಂಗ) ಗೊರವರು ಮಾಡುವರು. ಈ ಬಾರಿ (ಫೆ.೧೯.೨೦೨೨) ಅನಿಲ್ ದಳವಾಯಿ ಕಟ್ಟೆಗೆ ಕಟ್ಟಿದ ದಪ್ಪನೆಯ ಕಬ್ಬಿಣದ ಸರಪಳಿಯನ್ನು ಒಂದೇ ಬಾರಿಗೆ ಜಗ್ಗಿ ಹರಿಯುವ ಪವಾಡ ಮಾಡಿದರು. ಅವರಿಗೆ ಉಮೇಶ ದಳವಾಯಿ, ನಿಂಗಪ್ಪ ಸಣ್ಣ ನೀಲಪ್ಪನವರ, ಭರಮಪ್ಪ ಆರೇರ, ಹಾಗೂ ನಿಂಗಪ್ಪ ಆರೇರ ಸಹಾಯಕರಾಗಿ ಕಾರ್ಯನಿರ್ವಹಿಸಿದರು. (ದೇವರ ಗುಡ್ಡದಲ್ಲಿ ಕುರುಬ ಜನಾಂಗದವರು ಈ ಪವಾಡ ಮಾಡುತ್ತಾರೆ)ಪವಾಡ ಮಾಡುವಾಗ ಹನ್ನೊಂದು ಕಬ್ಬಿಣದ ಸರಳುಗಳನ್ನು ಬಳಸುತ್ತಾರೆ. ಭಕ್ತರು ಸರಪಳಿ ತುಂಡಾಗುವ ದೃಶ್ಯವನ್ನು ಬಹಳ ಸಂಯಮದಿಂದ ವೀಕ್ಷಣೆ ಮಾಡುತ್ತಾರೆ. ದೇವಸ್ಥಾನದ ಮುಂಭಾಗದ ತ್ರಿಶೂಲ ಮುದ್ರೆ ಹೊಂದಿರುವ ಕಲ್ಲಿನ ಕಂಬಕ್ಕೆ ಸರಪಳಿ ಬಿಗಿಯಲಾಗುತ್ತದೆ, ಕಲ್ಲಿಗೆ ಕಟ್ಟಿರುವ ಕಬ್ಬಿಣದ ಸರಪಳಿಯನ್ನು ಗೊರವರು ಏಳುಕೋಟಿ ಒಡೆಯ ಶ್ರೀ ಮೈಲಾರಲಿಂಗ ಎಂದು ಜಪ ಮಾಡುತ್ತಾ ಸರಪಳಿ ತುಂಡಾಗುವಂತೆ ಎಳೆಯಲು ಶುರು ಮಾಡುತ್ತಾರೆ. ನಂತರ ನೆರೆದ ಸಾವಿರಾರು ಸಂಖ್ಯೆ ಭಕ್ತರ ಎದುರಲ್ಲಿ ಸುಮಾರು ೧೫ ಅಡಿ ಉದ್ದದ ಸರಪಳಿಯನ್ನ ತನ್ನೆಲ್ಲಾ ತೋಳು ಬಲಬಿಟ್ಟು ಎಳೆಯುತ್ತಾನೆ. ಆನೆ ಜಗ್ಗಿದರು ಬಾರದ ಸರಪಳಿಯನ್ನು ಗೊರವರು ಒಂದೇ ಬಾರಿಗೆ ಜಗ್ಗಿ ತುಂಡು ತುಂಡು ಮಾಡುತ್ತಾರೆ. ಸರಪಳಿ ಅರ್ಧಕ್ಕೆ ಕಟ್ಟಾದರೆ ಬರಲಿರುವ ದಿನಗಳಲ್ಲಿ ದೇಶಕ್ಕೆ ಉತ್ತಮ ಮಳೆಯಾಗಿ ಬೆಳೆ ಸಂಮೃದ್ಧವಾಗಿ ಆಗುತ್ತದೆ. ಕಲ್ಲುಗೂಟಕ್ಕೆ ಸಮೀಪ ಸರಪಳಿ ತುಂಡಾದರೆ ಮಳೆ ಬೆಳೆ ಕಷ್ಟ ಎಂಬುದು ಜನಪದೀಯರ ನಂಬಿಕೆ. ಮುಷ್ಟಿಯ ತುದಿಯಲ್ಲಿ ಸರಪಳಿ ಹರಿದರೆ ನಾಡಿಗೆ ಉತ್ತಮ ಫಲ ಮಧ್ಯದಲ್ಲಿ ಹರಿದರೆ ಸಾಧಾರಣ ಫಲ, ಕೊನೆಯ ತುದಿ ಹರಿದರೆ ಸಂಕಷ್ಟಗಳು ಎದುರಾಗಲಿವೆ ಎಂಬ ನಂಬಿಕೆ ಭಕ್ತರಲ್ಲಿದೆ ಎಂದು ಭಗವಂತಪ್ಪ ಕಂಚಾವೀರ ಹೇಳುತ್ತಾರೆ.

ಸರಪಳಿಗೆ ಹಾಲು, ತುಪ್ಪ, ಜೇನುತುಪ್ಪ, ವಿವಿಧ ಹಣ್ಣುಗಳಿಂದ ತಯಾರಿಸಿದ ಪ್ರಸಾದವನ್ನು ಮಣೇವು ಮತ್ತು ದೋಣಿ ಸೇವೆಯಲ್ಲಿ ಸ್ವಾಮಿಗೆ ಭಕ್ತಿಪೂರ್ವಕವಾಗಿ ಸಮರ್ಪಿಸುವರು.

ಕನ್ನಡದ ಪ್ರಾಚೀನ ಗ್ರಂಥಗಳಲ್ಲಿ ಇಂತಹ ಪವಾಡಗಳ ಉಲ್ಲೇಖವಿದೆ. ಆದರೆ, ಅಲ್ಲಿ 'ಕಂಚಾವೀರರು' ಎಂಬ ಪ್ರಸ್ತಾಪವಿಲ್ಲ. ಬದಲಾಗಿ ಮೈಲಾರನ ಭಕ್ತರು ಅಥವಾ ಗೊರವರು ಹೀಗೆ ಮಾಡುತ್ತಿದ್ದರು ಎಂಬ ಉಲ್ಲೇಖವಿದೆ. ಉದಾಹರಣೆಗೆ: ಚನ್ನಬಸವಣ್ಣನವರ ವಚನಗಳಲ್ಲಿ 'ಭೈರವಾನನ್ನಾರಾಧಿಸಿ ಬಾಹಿರರಾದರಯ್ಯ, ಮೈಲಾರನನ್ನಾರಾಧಿಸಿ ಕುರುಳ ಬೆರಳ ಕಡಿಸಿ ನಾಯಾಗಿ ಬಗಳುತಿಪ್ಪರಯ್ಯಾ ....

**ಕಂಚಾವೀರರ ಇತಿಹಾಸ:** ಕಂಚಾವೀರರು ಮೈಲಾರನ ಗೊರವರಂತೆಯೇ ಪ್ರಾಶಸ್ತ್ಯವನ್ನು ಪಡೆದ ಮೈಲಾರಲಿಂಗನ ಭಕ್ತರ ಇನ್ನೊಂದು ವರ್ಗ – ಕಂಚಾವೀರರದು. ವೀರ ಪವಾಡಗಳಾದ ಕೈಕಾಲುಗಳಲ್ಲಿ ಕಬ್ಬಿಣದ ಸರಳುಗಳನ್ನು ತೂರಿಸುವುದು ಮೊದಲಾದ ಆನೇಕ ಭೀಭತ್ಸ ರೀತಿಯ ದೇಹದಂಡನಾ ವಿಧಿಗಳನ್ನು ದೇವರಿಗೆ ಪ್ರೀತಿ ಪೂರ್ವಕವಾಗಿ ನಡೆಸುವ ಭಕ್ತ ಸಮೂಹದ ಈ ವರ್ಗದವರೆಲ್ಲರೂ ಹರಿಜನರಾಗಿದ್ದಾರೆ. ಕಂಚಾವೀರರು ಪವಾಡ ಮಾಡುವುದಲ್ಲದೆ ದೇವರ ಹೆಸರಿನಲ್ಲಿ ಒಡೆಯರ ಹೆಸರಿನಲ್ಲಿ, ಹೆಗ್ಗಪ್ಪ ದೇವರಿಗೆ ಒಡಪು ಹೇಳುತ್ತಾರೆ. ಇದಕ್ಕೆ ಖಡ್ಗ – ಹೇಳುವುದೂ ಎಂದೂ ಕರೆಯುತ್ತಾರೆ. ಇದು ಅವರು ತಮ್ಮ ಅರಸ ಮೈಲಾರನಿಗೋ, ಒಡೆಯರಿಗೋ, ನಿಷ್ಠೆಯಿಂದ, ನಂಬಿಕೆಯ ಭಟರಾಗಿ ಸೇವೆ ಸಲ್ಲಿಸುತ್ತಿದ್ದ ಸಂಕೇತವಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ಲೌಕಿಕ ಉದ್ದೇಶಗಳಿಗಾಗಿ ಆತ್ಮ ಬಲಿದಾನ ಮಾಡುತ್ತಿದ್ದವರು ಇದರ ಬಗ್ಗೆ ಉಲ್ಲೇಖಗಳಿವೆ. 'ಕೆರೆಗೆ ಹಾರ'ದಂತಹ ಕಥೆಗಳಲ್ಲಿ ಒಂದು ಹುಡುಗಿ ಊರಿನ ಉದ್ಧಾರಕ್ಕಾಗಿ ಕೆರೆಯಲ್ಲಿ ನೀರು ಉಕ್ಕಲೆಂದು ಬಲಿದಾನ ಗೈದುದನ್ನು ನೆನಪಿಸಿಕೊಳ್ಳಬಹುದು. ಕಂಚಾವೀರರ ಸೇವೆಯ ಹಿಂದಿನ ಅವರ ಸಾಮಾಜಿಕ ಸ್ಥಿತಿಗತಿ ಇವುಗಳ ಅಧ್ಯಯನ ಅನೇಕ ಕುತೂಹಲಕಾರಿ ವಿವರಗಳನ್ನು ಒದಗಿಸಬಲ್ಲದು.

**ಕಂಚಾವೀರರು ಮತ್ತು ಮೈಲಾರಲಿಂಗನ ಸಂಬಂಧ:** ಎಸ್.ಎಸ್ ಹಿರೇಮಠರು ತಮ್ಮ "ದಲಿತ ಸಂಸ್ಕೃತಿ ಪರಂಪರೆ ಭಾಗ ಹಬ್ಬಗಳು ಮತ್ತು ಜಾತ್ರೆಗಳು ಭಾಗ -೨" ಇವುಗಳಲ್ಲಿ ಮೂಲ ಕೃಷಿಕರು ಎಂದರೆ ವಲಸೆಗಾರ ದ್ರಾವಿಡ ಪಶುಪಾಲಕರು ಆಗಮಿಸುವ ಮೊದಲು ಇಲ್ಲಿ ಕೃಷಿಕರಾಗಿದ್ದವರು ಹೊಲೆ – ಮಾದಿಗರು ಎಂದು ಚರ್ಚಿಸಿದ್ದಾರೆ. ಹೊಲೆ ಮಾದಿಗರು ಇಲ್ಲಿನ ಮೂಲ ಕೃಷಿಕರೇ ಆದರೆ ಇಲ್ಲಿನ ಕಂಚಾವೀರರು ಕೂಡ

ಹೊಲೆಮಾದಿಗರೇ ಆಗಿರುವುದು ಹಾಗೂ ಅವರು ಈ ಸಂಪ್ರದಾಯುದ ಆಚರಣಾ ವಿಧಿಗಳ ಅನಿವಾರ್ಯ ಭಾಗವೇ ಆಗಿರುವುದೂ ಕೂಡ ಈ ಸಂಪ್ರದಾಯಕ್ಕೂ ಕೃಷಿಗೂ ಇರುವ ಸಂಬಂಧವನ್ನು ಸೂಚಿಸುತ್ತದೆ.

ಎಂ ಎನ್ ವೆಂಕಟೇಶರವರ ಪ್ರಕಾರ ಇವೆಲ್ಲದರ ನಡುವೆ ಹೆಚ್ಚು ಸೂಕ್ಷ್ಮವಾಗಿ ಗಮನಿಸಬೇಕಾದದ್ದು. ಕಂಚಾವೀರರನ್ನು ಅವರಿಗೂ ಜಮೀನಿನಲ್ಲಿ ಭಾಗ ದೊರೆತಿದೆ. ಅವರಿಗೂ ದೇವಸ್ಥಾನದ ವತಿಯಿಂದ ಜಮೀನು ನೀಡಲಾಗಿದೆ. ಅಂದರೆ ಅವರಿಗೂ ಈ ಹಂಚಿಕೆ ಕುರುಬರಲ್ಲಿ ಹಂಚಿಕೆಯಾದಾಗಲೇ ಆಗಿದೆ. ಅಂದರೆ ಅದಕ್ಕಿಂತ ಮೊದಲು ಆ ಜಮೀನು ಅವರಿಗೆ ಇತ್ತೋ ಇಲ್ಲವೋ ಆದರೆ ಅಂದಿನಿಂದ ಅವರಿಗೆ ಅಧಿಕೃತವಾಗಿ ಅಧಿಕಾರ ಲಭ್ಯವಾಗಿದೆ. ಇದಕ್ಕೆ ಕಾರಣವೇನು? ಹೊಲೆ - ಮಾದಿಗರು ದ್ರಾವಿಡ ಮೂಲಿಗರೇ ಆಗಿದ್ದು ಮೂಲ ಕೃಷಿಕರಾಗಿದ್ದಲ್ಲಿ ಕಂಚಾವೀರರು ಮೂಲ ಕೃಷಿಕರಾಗಬೇಕಾಗಿತ್ತು. ಏಕೆಂದರೆ ಅವರು ಹರಿಜನರು. ಅವರಿಗೆ ಕುರುಬರೊಂದಿಗೆ ಭೂಮಿ ಹಂಚಿಕೆಯಾಗಿದೆ. ಎಂದರೆ ಅವರು ಕುರುಬರೊಂದಿಗೆ ಒಂದು ಒಪ್ಪಂದಕ್ಕೆ ಒಳಗಾಗಿದ್ದಿರಬೇಕು, ಅಥವ ಕುರುಬರಿಗೆ ಯಾವುದೋ ರೀತಿಯ ಸಹಾಯ ಮಾಡಿರಬೇಕು. ಇಂದಿನ ಜಾತ್ರೆಯಲ್ಲಿ ಕೂಡ ಕಂಚಾವೀರರ ಆಚರಣೆಗಳನ್ನು ನೋಡಿದಾಗ ತಿಳಿಯುವುದು ಇವರು ಮೂಲತಃ ಹರಿಜನರೇ ಆದರೂ, ಮಲ್ಲಾಸುರನ ಕಡೆಯವರೆ ಆಗಿದ್ದರೂ ಬಹುಶಃ ಮಲ್ಲಾಸುರನ ಸೋಲಿಗೆ ಕಾರಣವಾದ ಮತ್ತು ಮೈಲಾರನತ್ತ ಸಿಡಿದು ಬಂದ ಗುಂಪು ಇದಾಗಿರಬೇಕು. ಇದರಿಂದಾಗಿಯೇ ಇವರು ಮೈಲಾರನಿಗೆ ನಡೆದುಕೊಳ್ಳುತ್ತಿದ್ದಾರೆ. ಇಲ್ಲಿ ಎರಡು ರೀತಿಯ ವಾದಕ್ಕೆ ಅವಕಾಶಗಳುಂಟು. ಒಂದು ಮಲ್ಲಾಸುರನನ್ನು ಮೈಲಾರನಿಗೆ ತಂದೊಪ್ಪಿಸಿದವರು ಇವರಾಗಿರಬಹುದು. ಈ ಕುರಿತು ಉಲ್ಲೇಖ ಎಲ್ಲೂ ದೊರೆತಿಲ್ಲ. ಹೀಗಾಗಿ ಇವರಿಗೆ ಭೂಮಿ ದೊರೆತಿರಬಹುದು. ಇಂದು ಕೂಡ ಜಾತ್ರೆಯಲ್ಲಿ ಒಬ್ಬ ಕಂಚಾವೀರ ಓಡಾಡುತ್ತಾನೆ. ಉಳಿದ ಕಂಚಾವೀರರು ಅವನನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು ಎಳದುಕೊಂಡು ಬಂದು ದೇವರ ಮುಂದೆ ನಿಲ್ಲಿಸುತ್ತಾರೆ. ಆದರೆ ಆ ಮೇಲೆ ಭಂಡಾರ ಪಡೆದು ಮುಂದೆ ಸಾಗುತ್ತಾನೆ. ಅತೀ ಸಣ್ಣ ಆಚರಣೆಯಾಗಿದೆ. ಅತೀ ವಿಜೃಂಭಣೆಯಿಂದ ನಡೆಯುವ ದೊಡ್ಡ ಜಾತ್ರೆಯಲ್ಲಿ ಈ ಆಚರಣೆ ಗಮನಕ್ಕೆ ಬಾರದಿದ್ದರೂ ಇದು ಬಹಳ ಪ್ರಮುಖವಾದ ಅಂಶವೊಂದನ್ನು ಹೊರಹಾಕುತ್ತದೆ. ಓಡುತ್ತಿದ್ದ ಮಲ್ಲಾಸುರನನ್ನು ಆತನ ಕಡೆಯವರೇ ಹಿಡಿದು ತಂದೊಪ್ಪಿಸುವ ಘಟನೆಯತ್ತ ಇದು ಬೆಳಕು ಚೆಲ್ಲುತ್ತದೆ. ಈ ಹಿನ್ನಲೆಯಲ್ಲಿ ಕಂಚಾವೀರರು ಹರಿಜನ ಪಂಗಡದವರಾಗಿದ್ದು, ಮಲ್ಲಾಸುರನ ಬದಲು ಮೈಲಾರನ ಕಡೆ ಸೇರಿಕೊಂಡು ಒಂದು ಪಂಗಡವಾಗಿದ್ದಾರೆ. ಹೀಗಾಗಿಯೇ ಅವರು ಮೈಲಾರನಿಗೆ ಸಹಾಯ ಮಾಡಿದ್ದಕ್ಕಾಗಿ ಉಂಬಳಿ ಪಡೆಯುತ್ತಾರೆ.

**ಒಡಪು/ಒಡಬು/ಖಡ್ಗ ಹೇಳುವುದು:** ಕಂಚಾವೀರರು, ಒಡೆಯರ ಮುಂದೆ, ದೇವರ ಉತ್ಸವ ಮೂರ್ತಿ ಮುಂದೆ, ಹೆಗ್ಗಪ್ಪನ ಹೆಸರಿನಲ್ಲಿ, ಕಾರಣಿಕ ಹೇಳುವ ಮುನ್ನ, ಪವಾಡಗಳನ್ನು ಮಾಡುವ ಮುನ್ನ ಮೈಲಾರಲಿಂಗನಿಗೆ ಹೊಗಳಿಕೆ ರೂಪದಲ್ಲಿ ಈ ಒಡಬು ಹೇಳುತ್ತಾರೆ. 'ಒಡಬು' ಎಂದರೆ ಹೊಗಳುವಿಕೆ.... ಪರಾಕ್ ಹೇಳುವುದು. ಜುಂಜಪ್ಪನ ಸಂಪ್ರದಾಯದಲ್ಲಿ ಕಗ್ಗದ ಪದಗಳು ಹಾಗೂ ವೀರಗಾಸೆಯಲ್ಲಿ ಇಂತಹ ಪದಗಳು ಇವೆ. ಕಂಚಾವೀರರ ಗುಂಪು ವೀರಗಾಸೆಯ ಪ್ರಭಾವಕ್ಕೆ ಸಿಲುಕಿರುವ ಸಾಧ್ಯತೆಯೂ ಇದೆ. ವೀರಭದ್ರನೇ ಇವರಿಗೂ ಪ್ರಮುಖ ದೈವ. ವೀರಗಾಸೆಯಲ್ಲಿನ ವೀರಗಾಸೆ ಕುಣಿತ ಇಲ್ಲಿ ನೇರವಾಗಿ ಬಳಸಲ್ಪಡುವುದಿಲ್ಲವಾದರೂ ಅವರ ವೇಷ ಭೂಷಣ ಕತ್ತಿಯನ್ನು ಝಳಪಿಸುವುದು ಇತ್ಯಾದಿ ಆಚರಣೆಗಳು ಕಂಚಾವೀರರಿಗೂ ವೀರಗಾಸೆಯವರಿಗೂ ಇರುವ ಹೋಲಿಕೆಯನ್ನು ದೃಢಪಡಿಸುತ್ತವೆ. ಕಥೆಗಳಲ್ಲಿ ಕಂಚಾವೀರರ ಬಗ್ಗೆ ಬರುವ ವಿವರಗಳನ್ನು ನೋಡಿದರೆ ಮೈಲಾರಲಿಂಗನ ಸಹಾಯಕ್ಕೆ ಬಂದವರು ಸೋತು ಸುಣ್ಣವಾಗಿ ಹೋದರು. ಮಲ್ಲಾಸುರ ರಾಕ್ಷಸನಿಗೆ ಹೆದರಿ ನೀರಿನಲ್ಲಡಗಿದ್ದ ಮೈಲಾರನನ್ನು ಕಾಪಾಡಲು ಬಂದವರು ಇವರು. ಇಲ್ಲಿ ಮಲ್ಲಾಸುರನ ಆರ್ಭಟಕ್ಕೆ ಮೈಲಾರ ಹೆದರಿ ನಡುಗಿ ಯುದ್ಧ ಮಾಡಲಾಗದೆ ನೀರಿನಲ್ಲಿ ಅಡಗಿ ಕುಳಿತಿದ್ದ ಅವನಿಗೆ ಕಂಚಾವೀರರು ಸಹಾಯ ಮಾಡಿದರು. ಇವರು ಉದ್ಭವಗೊಂಡಿದ್ದು ಮೈಲಾರನನ್ನು ಕಾಪಾಡಲೆಂದು ಬಂದಿದ್ದ ವೀರಭದ್ರನಿಂದ.

ದೇವರಗುಡ್ಡದ ಕಂಚಾವೀರ ನಿಂಬಣ್ಣ ಮಾಸೂರರವರು ಹೇಳುವ ಪ್ರಕಾರ ಕೋಪದಿಂದ ವೀರಭದ್ರ ಜಟೆಯನ್ನು ನೆಲಕ್ಕೆ ಬಡಿದಾಗ ಐವರು ರಾಕ್ಷಸರೂಪಿಗಳು ಪ್ರತ್ಯಕ್ಷರಾದರು. ಅವರಿಗೆ ಮೈಲಾರಲಿಂಗನಿಗೆ ಸಹಾಯ ಮಾಡಿರೆಂದು ಅಪ್ಪಣೆ ಕೊಡಿಸಿದಾಗ ಅವರು ನೀರಿನಲ್ಲಿ ಮುಳುಗಿದ ಮೈಲಾರನನ್ನು ಮೇಲಕ್ಕೆ ಎತ್ತಿಹಿಡಿದರು. ಅವರನ್ನು ನೋಡಿ ಮೈಲಾರ ಥರಥರ ನಡುಗಿದ. ಅವರು ರಾಕ್ಷಸರಂತೆ ಕಾಣುತ್ತಿದ್ದು, ಕೊನೆಗೆ ಹೇಳಿದರು– "ತಂದೆ

ನಾವು ನಿನ್ನ ಮಕ್ಕಳು, ವೀರಭದ್ರನ ಸೇವಕರು, ನಿಮಗೆ ಸಹಾಯ ಮಾಡಲು ಬಂದೆವು" ಎಂದು. "ಹಾಗಾದರೆ ಬನ್ನಿ ಅಂತ ಹೇಳಿದ ಮೈಲಾರ ಅವರ ಜೊತೆಗೂಡಿ ಪುನಃ ರಾಕ್ಷಸರ ಮೇಲೆ ಬಿದ್ದನು". ಆಗ ಮೈಲಾರಗೆ ಜಯವಾಯಿತು. ಇದರಲ್ಲಿ ಗಮನಿಸಬೇಕಾದ ಹಲವು ಅಂಶಗಳಿವೆ. ಮೈಲಾರನ ಪರವಾಗಿ ಕಂಚಾವೀರರು ಯುದ್ಧ ಮಾಡಿದವರಲ್ಲ. ಮೈಲಾರ ಅವರನ್ನು ಸಹಾಯ ಮಾಡಲು ಕೋರಿಲ್ಲ. ಯುದ್ಧದ ಒಂದು ನಿರ್ದಿಷ್ಟ ಹಂತದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷರಾದವರು. ಅದುವರೆಗೂ ಬೇರೊಂದು ಸಮೂಹದಲ್ಲಿ ಬೆರೆತು ಬಂದಿದ್ದವರು ಇದ್ದಕ್ಕಿದ್ದಂತೆ ಮೈಲಾರನ ಬೆಂಗಾವಲಿಗೆ ನಿಂತು ಆ ಬಣದಿಂದ ದೂರಸರಿದು ತಮ್ಮದೇ ಆದ ಹೊಸ ಬಣವನ್ನು ಸೃಷ್ಟಿಸಿದವರು. ಮೊದಲು ಮೈಲಾರ ಇವರನ್ನು ನಂಬಲಿಲ್ಲ. ಅದಕ್ಕೆ ಕಾರಣ ಅವರ ವೇಷಭೂಷಣ. ಇವರನ್ನು ರಾಕ್ಷಸರೆಂದು ಬಗೆದ. ಅಂದರೆ ಇವರು ರಾಕ್ಷಸರ ಗುಂಪಿನಿಂದ ಬಂದವರಾಗಿದ್ದು ಅಥವಾ ಅಂತಹದೇ ರೂಪ ಹೊಂದಿದ್ದರು ಅಥವಾ ಅವರಂತೆಯೇ ವಸ್ತ್ರ ಉಡುಗೆಗಳನ್ನು ಧರಿಸಿದವರು. ಇಲ್ಲಿ ನಮಗೆ ಗೋಚರವಾಗುವುದೆಂದರೆ, ಕಂಚಾವೀರರ ಉಡುಗೆ ಮಲ್ಲಾಸುರನ ಸೈನಿಕರ ಉಡುಗೆಯಾಗಿತ್ತು ಎಂಬುದು. ಹೇಗೆ ಗೊರವರ ಉಡುಗೆಯು ಮಾರ್ತಾಂಡ ಭೈರವ ವೇಷಧಾರಿಯಾಗಿ ಬಂದ ಮೈಲಾರಲಿಂಗನ ಉಡುಗೆ ತೊಡುಗೆಯಂತೆ ಇದೆಯೋ, ಹಾಗೆ ಕಂಚಾವೀರರ ವೇಷ ಭೂಷಣಗಳು ಮಲ್ಲಾಸುರನ ವೇಷಭೂಷಣದಂತೆ ಇದ್ದಿರಬೇಕು.

ಒಟ್ಟಾರೆಯಾಗಿ ಹೇಳುವುದಾದರೆ ಕಂಚಾವೀರರು ವೀರಭದ್ರನ ಅಂಶದವರು ಇರಬಹುದು ಎಂಬುದು ಈ ಮೇಲೆ ತಿಳಿಸಿದ ಕಥೆಯಿಂದ ತಿಳಿದು ಬರುತ್ತದೆ. ಕಂಚಾವೀರರು ಬೀಭತ್ಸ ಸೇವೆಯಿಂದ ಶ್ರೀ ಸ್ವಾಮಿಗೆ, ಒಡೆಯರಿಗೆ ನಿಷ್ಠರಾಗಿದ್ದಾರೆ. ರಾಕ್ಷಸ ಮಲ್ಲಾಸುರನ ಗುಂಪಿನವರಾಗಿದ್ದರೂ ಮೈಲಾರಲಿಂಗನಿಗೆ ಸಹಾಯ ಮಾಡಿದವರು. ಮೈಲಾರಲಿಂಗನ ನಂಬಿಕೆಯನ್ನು ಉಳಿಸಿಕೊಳ್ಳಲು ಪ್ರತೀ ವರ್ಷ ಭಾರತ ಹುಣ್ಣಿಮೆ ಜಾತ್ರೆ ಸಂದರ್ಭದಲ್ಲಿ ಪವಾಡ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಕಂಚಾವೀರರ ಪೂರ್ವಜರು ಶಿರವನ್ನು ಕತ್ತರಿಸಿ ಬಾಳೆ ಎಲೆ ಮೇಲೆ ಇಟ್ಟು ದೇವರಿಗೆ ಪೂಜೆ ಸಲ್ಲಿಸುವ ಮೂಲಕ ಪವಾಡ ಮಾಡುತ್ತಿದ್ದರಂತೆ. ಈಗ ಕೈ ಮತ್ತು ಕಾಲುಗಳಿಗೆ ಶಸ್ತ್ರ ಚುಚ್ಚಿಕೊಳ್ಳುವ ಮೂಲಕ ಮೈಲಾರ ಜಾತ್ರೆಯಲ್ಲಿ ಪವಾಡ ಮಾಡುತ್ತಾರೆ. ಆದರೂ ಸಹ ರಕ್ತ ಬರುವುದಾಗಲಿ ಹಾಗು ಯಾವುದೇ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಕೇವಲ ಭಂಡಾರದಿಂದ ಗಾಯವನ್ನು ವಾಸಿಮಾಡಿಕೊಳ್ಳುತ್ತಿರುವುದು ವಿಶೇಷ. ಈ ಮೂಲಕ ಮೈಲಾರಲಿಂಗನಿಗೆ ಮತ್ತು ಒಡೆಯರಿಗೆ, ತಾವು ಮಾಡುವ ಸೇವೆಯಲ್ಲಿ ಅವರು ಇಟ್ಟಿರುವ ನಂಬಿಕೆಯನ್ನು ಪ್ರತಿ ವರ್ಷ ನಡೆಯುವ ಮೈಲಾರನ ಜಾತ್ರೆ ಸಂದರ್ಭದಲ್ಲಿ ಕಾಣಬಹುದು.

**ಪರಾಮರ್ಶನ ಗ್ರಂಥಗಳು**


- ವೆಂಕಟೇಶ ಎಂ ಎನ್, ೧೯೯೮, *ಮೈಲಾರದ ಜಾತ್ರೆಗಳು ಪ್ರದರ್ಶನ ಅಧ್ಯಯನ*, ಅಭಿ-ಆದರ್ಶ ಪ್ರಕಾಶನ ಭದ್ರಾವತಿ.
- ಹಳ್ಳಿಕೇರಿ ಎಫ್ ಟಿ, ೨೦೧೮, *ಹಾಲುಮತ ವ್ಯಾಸಂಗ-೭ ಮೈಲಾರಲಿಂಗ ಪರಂಪರೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಹಾದಿಮನಿ ಕೆ ಎಚ್, ೨೦೧೨, *ಹಾವೇರಿ ಜಿಲ್ಲೆಯ: ಜನಪದ ದೈವಗಳು*, ಅಪ್ರಕಾಶಕರು ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರರ್ಸ್ ಬೆಂಗಳೂರು.


ಮಾಹಿತಿದಾರರ ವಿವರ

- ಭಗವಂತಪ್ಪ ಕಂಚಾವೀರ ಮೈಲಾರ
- ಮಾಲತೇಶ ಕಂಚಾವೀರ ಮೈಲಾರ
- ನಿಂಬಣ್ಣ ಮಾಸೂರ ದೇವರಗುಡ್ಡ
- ಜುಂಜಪ್ಪ ಹಾಡೋರ ದೇವರಗುಡ್ಡ
- ಶಿವಪುತ್ರಪ್ಪ ಕಂಚಾವೀರ ಮೈಲಾರ
- ಹನುಮಂತ ದೇಸಾಯಿ, ಗದಗ ಜಿಲ್ಲಾ ಮುಂಡರಗಿ ತಾಲ್ಲೂಕು ನಾಗರಹಳ್ಳಿ,